Akashvani : Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

18.09.2025 19.35hrs

*********

ಮುಖ್ಯಾಂಶಗಳು :

- ಭಾರತ-ಅಮೆರಿಕಾ ತೆರಿಗೆ ಬಿಕ್ಕಟ್ಟು ಸಧ್ಯದಲ್ಲಿ ಬಗೆಹರಿಯುವ ಸಾಧ್ಯತೆ - ಮುಖ್ಯ ಆರ್ಥಿಕ ಸಲಹೆಗಾರ ಅನಂತ ನಾಗೇಶ್ವರನ್
- ಅಭಿವೃದ್ಧಿ ಹೊಂದಿದ ಬಿಹಾರ ನಿರ್ಮಿಸಲು ಕೇಂದ್ರ ಸರ್ಕಾರದ ಸಂಪೂರ್ಣ ಬೆಂಬಲ - ಗೃಹ ಸಚಿವ ಅಮಿತ್ ಶಾ
- ವಿಶ್ವದರ್ಜೆಯ ನೀಲಿ ಬಂದರುಗಳನ್ನು ನಿರ್ಮಿಸಲು ವಿಶ್ವಸಂಸ್ಥೆ ಜೊತೆ ಕೈಜೋಡಿಸಿದ ಭಾರತ
- ವಿಶ್ವ ಅಥ್ಲೆಟಿಕ್ ಚಾಂಪಿಯನ್ ಶಿಪ್; ಪಂದ್ಯದಿಂದ ನಿರ್ಗಮಿಸಿದ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ

****************************

ಭಾರತ-ಅಮೆರಿಕ ತೆರಿಗೆ ಬಿಕ್ಕಟ್ಟು ಕೆಲವೇ ದಿನಗಳಲ್ಲಿ ಬಗೆಹರಿಯುವ ಸಾಧ್ಯತೆ ಇದೆ ಎಂದು ಕೇಂದ್ರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ. ಕೊಲ್ಕೊತ್ತಾದಲ್ಲಿ ನಡೆಯುತ್ತಿರುವ ಭಾರತ್ ಚೇಂಬರ್ ಆಫ್ ಕಾಮರ್ಸ್ ಆಯೋಜಿಸಿದ್ದ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ನಾಗೇಶ್ವರನ್, ಬಿಕ್ಕಟ್ಟು ಕೊನೆಗೊಳಿಸಲು ಉಭಯ ಸರ್ಕಾರಗಳ ನಡುವೆ ಈಗಾಗಲೇ ಮಾತುಕತೆಗಳು ನಡೆಯುತ್ತಿದ್ದು ಏಳರಿಂದ ಎಂಟು ವಾರಗಳಲ್ಲಿ ಬಗೆಹರಿಯಲಿದೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ. ಪರಸ್ಪರ ಸುಂಕಗಳನ್ನು ಶೇಕಡಾ ೨೫ ರಿಂದ ಶೇಕಡಾ ೧೫ ಕ್ಕೆ ಇಳಿಸಲು ಭಾರತ-ಅಮೆರಿಕ ನಡುವೆ ಮಾತುಕತೆಗಳು ನಡೆಯುತ್ತಿವೆ ಎಂದು ಸ್ಪಷ್ಟಪಡಿಸಿದ್ದಾರೆ.

****************************

ಬಿಹಾರದ ಎನ್‌ಡಿಎ ಸರ್ಕಾರವು ಕೇಂದ್ರ ಸರ್ಕಾರದ ಸಂಪೂರ್ಣ ಬೆಂಬಲದೊಂದಿಗೆ ಅಭಿವೃದ್ಧಿ ಹೊಂದಿದ ಬಿಹಾರವನ್ನು ನಿರ್ಮಿಸುವತ್ತ ಕೆಲಸ ಮಾಡುತ್ತಿದೆ ಎಂದು ಹಿರಿಯ ಬಿಜೆಪಿ ನಾಯಕ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ರೋಹ್ತಾಸ್ ಜಿಲ್ಲೆಯ ಡೆಹ್ರಿ-ಆನ್-ಸೋನ್‌ನಲ್ಲಿ ಶಹಾಬಾದ್ ಮತ್ತು ಮಗಧ್ ಪ್ರದೇಶಗಳ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರ ಪ್ರಾದೇಶಿಕ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷದ ಕಾರ್ಯಕರ್ತರಲ್ಲಿ ಒಗ್ಗಟ್ಟಿಗಾಗಿ ಅವರು ಮನವಿ ಮಾಡಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ "ಮತದಾರ ಅಧಿಕಾರ ಯಾತ್ರೆ" ವಾಸ್ತವವಾಗಿ ನುಸುಳುಕೋರರನ್ನು ರಕ್ಷಿಸುವ ಅಭಿಯಾನವಾಗಿದೆ ಎಂದು ಅವರು ಆರೋಪಿಸಿದ್ದಾರೆ.

****************************

ಭಾರತ ವಿಶ್ವ ದರ್ಜೆಯ ನೀಲಿ ಬಂದರುಗಳನ್ನು ನಿರ್ಮಿಸಲು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಜೊತೆಗೆ ಕೈಜೋಡಿಸಿದೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದ ಅಡಿಯಲ್ಲಿರುವ ಮೀನುಗಾರಿಕೆ ಇಲಾಖೆಯು ಭಾರತದಲ್ಲಿ ನೀಲಿ ಬಂದರು ಮೂಲಸೌಕರ್ಯವನ್ನು ಬಲಪಡಿಸಲು ಆಹಾರ ಮತ್ತು ಕೃಷಿ ಸಂಸ್ಥೆ ಜೊತೆ ತಾಂತ್ರಿಕ ಸಹಕಾರ ಕಾರ್ಯಕ್ರಮದ ಒಪ್ಪಂದಕ್ಕೆ ಸಹಿ

ಹಾಕಿದೆ.  ಮೂರು ಪೈಲಟ್ ಬಂದರುಗಳಾದ ದಿಯುವಿನ ವನಕ್‌ಬರಾ, ಪುದುಚೇರಿಯ ಕಾರೈಕಲ್ ಮತ್ತು ಗುಜರಾತ್‌ನ ಜಖೌಗಳಿಗೆ ಒಟ್ಟು ೩೬೯ ಕೋಟಿ ೮ ಲಕ್ಷ ರೂಪಾಯಿ ಹೂಡಿಕೆಯೊಂದಿಗೆ ಅನುಮೋದನೆ ನೀಡಲಾಗಿದೆ.

****************************

ಅಮೆರಿಕದ ಭಾರತೀಯ ರಾಯಭಾರ ಕಚೇರಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಭಾರತ ಮತ್ತು ಅಮೆರಿಕ ತಮ್ಮ ಬಾಹ್ಯಾಕಾಶ ಪಾಲುದಾರಿಕೆಯಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿವೆ ಎಂದು ವಾಷಿಂಗ್ಟನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಬಾಹ್ಯಾಕಾಶದಲ್ಲಿ ದಶಕಗಳ ಜಂಟಿ ಪ್ರಯತ್ನಗಳನ್ನು ಪುನರ್ ಪರಿಶೀಲಿಸಿದ ಸಭೆ, ನಿಸಾರ್ ಉಪಗ್ರಹದ ಉಡಾವಣೆ ಮತ್ತು ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ದ ಆಕ್ಸಿಯಮ್ ಮಿಷನ್ -೪ ನಂತಹ ಇತ್ತೀಚಿನ ಸಾಧನೆಗಳನ್ನು ಸ್ಮರಿಸಿತು. ಭಾರತೀಯ ರಾಯಭಾರಿ ವಿನಯ್ ಕ್ವಾತ್ರಾ ಭಾರತದ ಬಾಹ್ಯಾಕಾಶ ಕಾರ್ಯಕ್ರಮದ ಭವಿಷ್ಯದ ಬಗ್ಗೆ ಮಾತನಾಡಿದರು. ನಾಸಾದ ಡಾ. ಕರೆನ್ ಸೇಂಟ್ ಜರ್ಮೈನ್ ಅವರು ನಿಸಾರ್ ಮಿಷನ್ ಮತ್ತು ನಾಸಾ ಮತ್ತು ಇಸ್ರೋ ನಡುವಿನ ತಂಡದ ಕೆಲಸಗಳ ಬಗ್ಗೆ ಚರ್ಚಿಸಿದರು.

****************************

ಪ್ರಧಾನಿ ನರೇಂದ್ರ ಮೋದಿ ಹಾಗೂ ಹೊಸದಾಗಿ ನೇಮಕಗೊಂಡ ನೇಪಾಳ ಪ್ರಧಾನಿ ಸುಶೀಲಾ ಕಾರ್ಕಿ ಇಂದು ದೂರವಾಣಿ ಸಂಭಾಷಣೆ ನಡೆಸಿದರು. ನೇಪಾಳ ಪ್ರಧಾನಿ ಕರ್ಕಿ, ನರೇಂದ್ರ ಮೋದಿ ಅವರಿಗೆ ೭೫ ನೇ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ನೇಪಾಳದ ಪ್ರಧಾನಿ ಹುದ್ದೆಗೆ ನೇಮಕಗೊಂಡಿದ್ದಕ್ಕಾಗಿ ಪ್ರಧಾನಿ ಕರ್ಕಿ ಅವರನ್ನು ಭಾರತದ ಪ್ರಧಾನಿ ಅಭಿನಂದಿಸಿದರು. ನೇಪಾಳ ಮತ್ತು ಭಾರತದ ನಡುವಿನ ಶತಮಾನಗಳಷ್ಟು ಹಳೆಯದಾದ ಸ್ನೇಹ ಸಂಬಂಧಗಳನ್ನು ಅವರು ನೆನಪಿಸಿಕೊಂಡ ಕರ್ಕಿ ಅವರು,  ನೇಪಾಳದ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಕುರಿತು ಪ್ರಧಾನಿ ಮೋದಿಗೆ ವಿವರಿಸಿದರು. ಮುಂದಿನ ದಿನಗಳಲ್ಲಿ ಉತ್ತಮ ನೆರೆಯವನಾಗಿ ನೇಪಾಳಕ್ಕೆ ಭಾರತದ ನಿರಂತರ ಬೆಂಬಲ ಹಾಗೂ ಶಾಂತಿ, ಸ್ಥಿರತೆಯನ್ನು ಪುನಃಸ್ಥಾಪಿಸುವ ಅವರ ಪ್ರಯತ್ನಗಳಿಗೆ ಭಾರತದ ದೃಢ ಬೆಂಬಲವನ್ನು ಪುನರುಚ್ಚರಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ನಾಳೆಯ ರಾಷ್ಟ್ರೀಯ ದಿನದಂದು ನೇಪಾಳದ ಜನರಿಗೆ ಶುಭಾಶಯಗಳನ್ನು ಸಲ್ಲಿಸಿದರು.

****************************

ಸೇವೆ ಮತ್ತು ಸುಶಾಸನದ ಮಂತ್ರದಿಂದ ಪ್ರೇರಣೆ ಪಡೆದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರವು, ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಇಂದು, ಈ ವಿಶೇಷ ಸರಣಿ - "ಸೇವಾ ಪರ್ವ್" ನಲ್ಲಿ, ಕೃಷಿಯಲ್ಲಿ ಮುಂದುವರಿದ ತಂತ್ರಜ್ಞಾನದ ಮೂಲಕ ಮೋದಿ ಸರ್ಕಾರವು ರೈತರ ಜೀವನವನ್ನು ಹೇಗೆ ಪರಿವರ್ತಿಸಿದೆ ಎಂಬುದನ್ನು ತಿಳಿಸುತ್ತದೆ.

ಧ್ವನಿ : ಅನುಜ್ ಕುಮಾರ್

ನಮ್ಮ ವಿಶಾಲವಾದ ಹೊಲಗಳಲ್ಲಿ, ಮೌನ ಕ್ರಾಂತಿಯು ತೆರೆದುಕೊಳ್ಳುತ್ತಿದೆ, ಅಲ್ಲಿ ನಮ್ಮ ರೈತರ ಬುದ್ಧಿವಂತಿಕೆಯು ಈಗ ತಂತ್ರಜ್ಞಾನದ ಶಕ್ತಿಯಿಂದ ಬಲಗೊಂಡಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಕೃಷಿಯು ತಂತ್ರಜ್ಞಾನ-ಚಾಲಿತ ರೂಪಾಂತರವನ್ನು ಅಳವಡಿಸಿಕೊಳ್ಳುತ್ತಿದೆ, ರೈತರಿಗೆ ನಾವೀನ್ಯತೆ, ಒಳಗೊಳ್ಳುವಿಕೆ ಮತ್ತು ಸಮೃದ್ಧಿಯೊಂದಿಗೆ ಅಧಿಕಾರ ನೀಡುತ್ತಿದೆ.

****************************

ದೇಶದ ಒಟ್ಟಾರೆ ತೆರಿಗೆ ಮತ್ತು ಆದಾಯ ವ್ಯವಸ್ಥೆಯನ್ನು ಆಧುನೀಕರಿಸುವುದು ಮತ್ತು ಸರಳಗೊಳಿಸುವುದು ಹೊಸ ಯುಗದ ಜಿಎಸ್‌ಟಿ ಸುಧಾರಣೆಗಳ ಉದ್ದೇಶವಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅವರು ಇಂದು ಕೋಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯದಲ್ಲಿ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣಾ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಸರಕು ಮತ್ತು ಸೇವಾ ತೆರಿಗೆಯಲ್ಲಿನ ಸುಧಾರಣೆಗಳ ಕುರಿತು ವಿವರಿಸಿ, ತೆರಿಗೆ ದರಗಳನ್ನು ಕಡಿಮೆ ಮಾಡಿರುವುದು ಮಾತ್ರವಲ್ಲದೆ, ಆದಾಯ ತೆರಿಗೆ ಕಾಯ್ದೆಯನ್ನು ಹೆಚ್ಚು ಸಮಕಾಲೀನಗೊಳಿಸಲಾಗಿದೆ ಎಂದು ಹಣಕಾಸು ಸಚಿವರು ಹೇಳಿದರು.

ಧ್ವನಿ : ನಿರ್ಮಲಾ ಸೀತಾರಾಮನ್

ಸುಧಾರಣೆಯನ್ನು ಕೇವಲ ಎಂಟು ತಿಂಗಳೊಳಗೆ ಜಾರಿಗೆ ತರಲಾಯಿತು. ಪ್ರತಿಯೊಬ್ಬ ನಾಗರಿಕನು ಹೊಸ ಜಿಎಸ್‌ಟಿ ಸುಧಾರಣೆಗಳಿಂದ ಪ್ರಯೋಜನ ಪಡೆಯುತ್ತಾನೆ. ಹಬ್ಬದ ಅವಧಿಯ ಆರಂಭದಲ್ಲಿ, ದುರ್ಗಾ ಪೂಜೆಗೆ ಮುಂಚೆಯೇ ಹೊಸ ತೆರಿಗೆ ದರಗಳು ಜಾರಿಗೆ ಬರುತ್ತವೆ ಎಂದು ಅವರು ಹೇಳಿದರು.

****************************

ಮತಗಳನ್ನು ಅಳಿಸಲಾಗಿದೆ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಆರೋಪಗಳು ಸುಳ್ಳು ಹಾಗೂ ಆಧಾರರಹಿತವಾಗಿವೆ ಎಂದು ಚುನಾವಣಾ ಆಯೋಗ ಇಂದು ಹೇಳಿದೆ. ರಾಹುಲ್ ಗಾಂಧಿಯವರ ತಪ್ಪಾಗಿ ಭಾವಿಸಿದಂತೆ, ಯಾವುದೇ ಸಾರ್ವಜನಿಕರು ಯಾವುದೇ ಮತವನ್ನು ಆನ್‌ಲೈನ್‌ನಲ್ಲಿ ಅಳಿಸಲು ಸಾಧ್ಯವಿಲ್ಲ ಎಂದು ಆಯೋಗ ಹೇಳಿದೆ. ೨೦೨೩ ರಲ್ಲಿ, ಕರ್ನಾಟಕದ ಅಳಂದ್ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರನ್ನು ಅಳಿಸಲು ಕೆಲವು ವಿಫಲ ಪ್ರಯತ್ನಗಳು ನಡೆದಿವೆ ಮತ್ತು ಈ ವಿಷಯದ ಬಗ್ಗೆ ತನಿಖೆ ನಡೆಸಲು ಆಯೋಗವು ಸ್ವತಃ ಎಫ್‌ಐಆರ್ ದಾಖಲಿಸಿದೆ ಎಂದು ಆಯೋಗ ಹೇಳಿದೆ. ದಾಖಲೆಗಳ ಪ್ರಕಾರ, ೨೦೧೮ ರಲ್ಲಿ ಬಿಜೆಪಿಯ ಸುಭಾದ್ ಗುತ್ತೇದಾರ್ ಮತ್ತು ೨೦೨೩ ರಲ್ಲಿ ಕಾಂಗ್ರೆಸ್‌ನ ಬಿ.ಆರ್. ಪಾಟೀಲ್ ಅವರು ಅಳಂದ್ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಸಾಫ್ಟ್‌ವೇರ್ ಮ್ಯಾನಿಪ್ಯುಲೇಷನ್ ಮೂಲಕ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲಾಗಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದರು.

****************************

ಭಾರತದ ಜಾವೆಲಿನ್ ತಾರೆ ಮತ್ತು ವಿಶ್ವ ಚಾಂಪಿಯನ್ ನೀರಜ್ ಚೋಪ್ರಾ ಟೋಕಿಯೊದಲ್ಲಿ ಇಂದು ನಡೆದ ೨೦೨೫ ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ ನಿಂದ ಹೊರಬಿದ್ದಿದ್ದಾರೆ. ತಮ್ಮ ಮೊದಲ ಐದು ಪ್ರಯತ್ನಗಳ ನಂತರ ಎಂಟನೇ ಸ್ಥಾನ ಪಡೆದುಕೊಂಡಿದ್ದಾರೆ. ಪ್ರಸ್ತುತ ನಾಲ್ಕನೇ ಸ್ಥಾನದಲ್ಲಿರುವ ಭಾರತದವರೇ ಆದ ಸಚಿನ್ ಯಾದವ್ ವಿಶ್ವ ಚಾಂಪಿಯನ್ ಶಿಪ್ ನಲ್ಲಿ ಭಾರತದ ಏಕೈಕ ಭರವಸೆಯಾಗಿ ಉಳಿದಿದ್ದಾರೆ. ಸಚಿನ್ ಯಾದವ್ ಅಂತಿಮ ಸುತ್ತಿಗೆ ಪ್ರವೇಶ ಪಡದಿದ್ದಾರೆ.

****************************

ದೇಶೀಯ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಇಂದು ಉತ್ತಮ ಆರಂಭ ಕಂಡವು. ಮಧ್ಯಾಹ್ನದ ವಹಿವಾಟಿನಲ್ಲಿ ಆವೇಗ ಕಳೆದುಕೊಂಡವು. ಹಿನ್ನಡೆಯ ಹೊರತಾಗಿಯೂ, ಇಂದು ಅವು ಸುಮಾರು ೦.೪ ಪ್ರತಿಶತದಷ್ಟು ಏರಿಕೆ ಕಂಡವು. ಈ ತಿಂಗಳು ಸೆನ್ಸೆಕ್ಸ್ ೩೨೦ ಪಾಯಿಂಟ್‌ಗಳ ಏರಿಕೆಯಾಗಿ ೮೩ ಸಾವಿರದ ಗಡಿ ದಾಟಿ ೮೩ ಸಾವಿರದ ೧೪ರಲ್ಲಿ ಮುಕ್ತಾಯವಾದರೆ, ನಿಫ್ಟಿ ೯೪ ಪಾಯಿಂಟ್‌ಗಳ ಏರಿಕೆ ಕಂಡು ೨೫ ಸಾವಿರದ ೪೨೪ರಲ್ಲಿ ಸ್ಥಿರವಾಯಿತು.

****************************